## 25ರ ಹೊಸ್ತಿಲಲಿ

# ಛಲದಂಕಮಲ್ಲರ ಬೆವರ ಚರಿತೆ

ಬಾಗಲಕೋಟೆ ಜಿಲ್ಲೆ ಜಮಖಂಡಿಯ ಚಿಕ್ಕಪಡಸಲಗಿಯಲ್ಲಿ ಕೃಷ್ಣಾ ನದಿಗೆ ನಿರ್ಮಿಸಿದ ಬ್ಯಾರೇಜ್‌ಗೆ ಈಗ ಬೆಳ್ಳಿಹಬ್ಬದ ಸಂಭ್ರಮ. ಬೆಳವಲದ ನಾಡನ್ನು ಶ್ರೀಮಂತಗೊಳಿಸಲು ರೈತರೇ ಪಟ್ಟ ಶ್ರಮದ ಫಲವಿದು. ಹೀಗಾಗಿ ಬ್ಯಾರೇಜ್‌ನ ಪ್ರತಿ ಕಣಕ್ಕೂ ರೈತರ ಬೆವರ ಹನಿಯ ಸಂಬಂಧವಿದೆ. ಪುನಃ ಎದುರಾಗಿರುವ ನೀರಿನ ಸಮಸ್ಯೆ ನೀಗಿಸಲು ಇದೀಗ ಬ್ಯಾರೇಜ್‌ನ ಎತ್ತರ ಹೆಚ್ಚಿಸಿ ನದಿ ನೀರನ್ನು ನದಿಗೆ ವಾಪಸ್ ಹಾಕಲಾಗಿದೆ. ಹೀಗಾಗಿ ಬೆಳ್ಳಿಹಬ್ಬದ ಸಂಭ್ರಮ ಇಮ್ಮಡಿಗೊಂಡಿದೆ...

**ವಿಕ್ರಂ ಕಾಂತಿಕೆರೆ**


1


2


3


4


5

ಸಣ್ಣ ಮಟ್ಟದಲ್ಲಿ ವ್ಯವಸಾಯ ಮಾಡುತ್ತಿದ್ದ ರೈತ ಸಮುದಾಯ, ಎಲ್ಲೆಲ್ಲೂ ಕಾಣಸಿಗುವ ಜೋಪಡಿಗಳು, ಮನೆಗೊಂದು ಆಡು, ಆಕಳು. ಬೆಳಕು ಇಳಿಯುತ್ತಿದ್ದಂತೆ ಮನೆ ಬೆಳಗುತ್ತಿದ್ದ ಚಿಮಣಿ ದೀಪಗಳು... ಇದು ಬಾಗಲಕೋಟೆಯ ಕೃಷ್ಣಾ ನದಿ ತೀರದ ಹಲವು ಹಳ್ಳಿಗಳಲ್ಲಿ ಇಪ್ಪತ್ತೈದು ವರ್ಷಗಳ ಹಿಂದಿದ್ದ ಚಿತ್ರಣ. ಈಗ ಈ ಚಿತ್ರಣ ಸಂಪೂರ್ಣ ತಿರುಗಿದೆ. ಗುಡಿಸಲು ಇದ್ದ ಜಾಗದಲ್ಲಿ ದೊಡ್ಡ ದೊಡ್ಡ ಮನೆಗಳು ಎದ್ದು ನಿಂತಿವೆ. ಚಿಮಣಿ ದೀಪಗಳು ಕಾಣಸಿಗುವುದೇ ಇಲ್ಲ. ಮನೆಗಳ ಮುಂದೆ ಬೈಕ್, ಜೀಪ್, ಟ್ರ್ಯಾಕ್ಟರ್‌ಗಳು. ಹೊಲದಲ್ಲಿ ಸಮೃದ್ಧವಾಗಿ ಬೆಳೆದು ನಿಂತಿರುವ ಕಬ್ಬು.

ಇವೆಲ್ಲಾ ನೋಡಿ ಈ ಬದಲಾವಣೆ ಸಾಧ್ಯವಾದದ್ದು ಸರ್ಕಾರದ ಕೃಪೆಯಿಂದ ಎಂದುಕೊಂಡರೆ ಅದು ತಪ್ಪು. ಇಲ್ಲಿನ ಜನಸಾಮಾನ್ಯ ತನ್ನ ರಟ್ಟೆಯ ಬಲ, ಛಲದ ಶಕ್ತಿ ಪ್ರದರ್ಶಿಸಿದ್ದರ ಫಲವಿದು. ರೈತರೇ ನಿರ್ಮಿಸಿದ ದೇಶದ ಪ್ರಪ್ರಥಮ ಬ್ಯಾರೇಜ್‌ನ ಕೊಡುಗೆ. ಈ ಬ್ಯಾರೇಜ್‌ಗೆ ಈಗ 25 ವರ್ಷ ತುಂಬಿದೆ; ಬೆಳ್ಳಿ ಹಬ್ಬದ ಸಂಭ್ರಮ ಈ ಭಾಗದ ಪ್ರತಿಯೊಬ್ಬರ ಮನದಲ್ಲೂ ಮನೆ ಮಾಡಿದೆ.

25 ವರ್ಷಗಳ ಹಿಂದೆ ಕೃಷ್ಣೆಯ ತೀರದ ಹಳ್ಳಿಗಳ ರೈತರು ಪ್ರತಿ ವರ್ಷ ಬೇಸಿಗೆಯಲ್ಲಿ ಹೇಳತೀರದ ಬವಣೆ ಅನುಭವಿಸುತ್ತಿದ್ದರು. ಮೈಮುರಿದು ದುಡಿಯಲು ಮನಸ್ಸಿತ್ತು, ದೇಹ ಗಟ್ಟಿ ಇತ್ತು. ಆದರೆ ನೀರಿಲ್ಲದ ಕಾರಣ ಬೆಳೆ ಒಣಗಿ ಹೋಗುತ್ತಿತ್ತು. ಹೊಲ ಇದ್ದರೂ ಹೊಟ್ಟೆಗೆ ಹಿಟ್ಟು ಹುಡುಕಿಕೊಂಡು ಜನರು ಮಹಾರಾಷ್ಟ್ರ ಮತ್ತಿತರ ಕಡೆಗಳಿಗೆ ಗುಳೆ ಹೋಗಬೇಕಾದ ಪರಿಸ್ಥಿತಿ. ಇಪ್ಪತ್ತು ವರ್ಷಗಳಿಂದ ಈ ಬವಣೆ ಅನುಭವಿಸಿದ ರೈತರಿಗೆ ಇದ್ದದ್ದು ಒಂದೇ ಒಂದು ಬೇಡಿಕೆ; ಜಿಲ್ಲೆಯ ಜಮಖಂಡಿಯ ಚಿಕ್ಕಪಡಸಲಗಿಯಲ್ಲಿ ಹರಿಯುವ ಕಷ್ಣೆಗೆ ಒಂದು ತಂಗುದಾಣ ನಿರ್ಮಿಸುವುದು. ಇದನ್ನು ಸರ್ಕಾರದ ಮುಂದೆ ಇಟ್ಟಾಗ ಸಿಕ್ಕಿದ್ದು ನಕಾರಾತ್ಮಕ ಉತ್ತರ. ಕೊನೆಗೊಮ್ಮೆ ಸರ್ಕಾರ ಯೋಜನೆ ಜಾರಿಗೆ ಮುಂದಾದರೂ ಇದಕ್ಕೆ ತಗಲುವ ವೆಚ್ಚವನ್ನು ರೈತರೇ ನೀಡಬೇಕೆಂಬ ಷರತ್ತು ವಿಧಿಸಿತು. ನೀರಿನ ದಾಹ ಹೆಚ್ಚಾಗಿದ್ದರಿಂದ ರೈತರು ಹಣ ಸಂಗ್ರಹಿಸಿ ದೊರೆಯ ಬಳಿಗೆ ಹೋದರು. ಆದರೆ ರೈತರು ಸಂಗ್ರಹಿಸಿದ ಒಂದೂವರೆ ಲಕ್ಷ ರೂಪಾಯಿಗೆ ಅಧಿಕಾರಿಗಳ 'ಲೆಕ್ಕಾಚಾರದ' ಮುಂದೆ ಬೆಲೆ ಸಿಗಲಿಲ್ಲ. ಬ್ಯಾರೇಜ್ ನಿರ್ಮಾಣಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿ ಅಂದಾಜು ವೆಚ್ಚ ಅವರು ಲೆಕ್ಕ ಹಾಕಿದರು. ಇಷ್ಟು ಖರ್ಚು ಮಾಡಿ ಬ್ಯಾರೇಜ್ ನಿರ್ಮಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಎಂಜಿನಿಯರುಗಳ ವರದಿಗೆ ಕಿವಿಗೊಟ್ಟ ಸರ್ಕಾರ ಯೋಜನೆಯನ್ನು ಕೈಬಿಟ್ಟಿತು. ಇದರಿಂದ ಬೇರೆ ದಾರಿ ಕಾಣದ ರೈತರು ಸ್ವತಃ ಅಂಗಣಕ್ಕೆ ಇಳಿದರು. ಬ್ಯಾರೇಜ್ ನಿರ್ಮಿಸಲು ಕಂಕಣ ತೊಟ್ಟರು. ಹಗಲಿರುಳು ತಂಡೋಪತಂಡವಾಗಿ ದುಡಿದರು; ಇತಿಹಾಸ ನಿರ್ಮಿಸಿದರು.

ಒಂದು ವರ್ಷದಲ್ಲಿ ಸಿದ್ಧಗೊಂಡ ಬ್ಯಾರೇಜ್‌ಗೆ ಹುಬ್ಬಳ್ಳಿ, ಮಹಾರಾಷ್ಟ್ರದಿಂದ ನಿರ್ಮಾಣ ಸಾಮಗ್ರಿಗಳನ್ನು ತರಲಾಗಿತ್ತು. ಆದರೆ ಕೆಲಸ ಸಂಪೂರ್ಣವಾಗಿ ರೈತರ ಬೆವರಿನ ಹನಿಯಿಂದಲೇ ನಡೆದಿದೆ.

ಅಧಿಕಾರಿಗಳು, ಬನಹಟ್ಟಿಯ ನೇಕಾರ ಸಂಘ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳು, ಆಟೊ ಚಾಲಕರು, ಬ್ಯಾಂಕ್ ಉದ್ಯೋಗಿಗಳು, ವಕೀಲರು ಮುಂತಾದವರು ಜನರ ಭಗೀರಥ ಯತ್ನಕ್ಕೆ ಆರ್ಥಿಕ, ನೈತಿಕ ಬಲ ತುಂಬಿದ್ದಾರೆ. ಬ್ಯಾಂಕ್ ನೌಕರರು ಒಂದು ದಿನದ ಶ್ರಮದಾನ ಮಾಡಿದ್ದಾರೆ, ಒಂದು ದಿನದ ವೇತನವನ್ನು ನೀಡಿದ್ದಾರೆ. ಬೀಳಗಿಯ ಕ್ರೀಡಾಪಟುಗಳು, ವಿಜಯಪುರ, ರಬಕವಿ ಮುಂತಾದ ದೂರದ ಊರುಗಳ ಜನರು ಕೂಡ ಬಂದು ಕೈ ಜೋಡಿಸಿದ್ದಾರೆ.

ಜನರ ಶಕ್ತಿಯಿಂದ ಎದ್ದು ನಿಂತ ಬ್ಯಾರೇಜ್‌ಗೆ ಆದ ವೆಚ್ಚ ಒಂದು ಕೋಟಿ. 430 ಮೀಟರ್ ಉದ್ದ, ಏಳು ಮೀಟರ್ ಎತ್ತರದ ಬ್ಯಾರೇಜ್ ಆಗ ಮೂರು ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿತ್ತು. 30 ಸಾವಿರ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ ಬ್ಯಾರೇಜ್, ಜಮೀನು ಇಲ್ಲದ ಒಂದೂವರೆ ಲಕ್ಷ ಜನರಿಗೆ ಉದ್ಯೋಗ ನೀಡಿತ್ತು. ಜನರ ವ್ಯವಸಾಯ ಮೂಲದ ಆದಾಯ ಹೆಚ್ಚಿತು. ಸುಮಾರು ಹತ್ತು ಸಾವಿರ ಕುಟುಂಬಗಳು ಬಡತನ ರೇಖೆಯಿಂದ ಮೇಲೆ ಬಂದವು ಎಂದು ಅಂದಾಜು ಮಾಡಲಾಗಿತ್ತು. ನೀರಿಲ್ಲದೆ ಪ್ರತಿ ವರ್ಷ ಎರಡರಿಂದ ಮೂರು ಕೋಟಿ ರೂಪಾಯಿ ನಷ್ಟ ಆಗುತ್ತಿದ್ದ ಪ್ರದೇಶಕ್ಕೆ ವರ್ಷದ ಹನ್ನೆರಡು ತಿಂಗಳು ಕೂಡ ನೀರು ಸಿಕ್ಕಿದ್ದರಿಂದ ಭೂಮಿ ಸಮೃದ್ಧವಾಯಿತು, ಜನರು ಸಂತಸಗೊಂಡರು. ಈ ಕಾರಣದಿಂದಲೇ ಬೆಳ್ಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆ ನಡೆಯುತ್ತಿದೆ. ಡಿಸೆಂಬರ್ 26 ರಿಂದ ನಡೆದ ರಾಷ್ಟ್ರಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಮೂಲಕ ಆಚರಣೆಗೆ ಚಾಲನೆ ಸಿಕ್ಕಿದ್ದು, ಕೆಲವು ತಿಂಗಳು ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ.


ಸಿದ್ದು ನ್ಯಾಮಗೌಡ

### ಆ ದಿನಗಳು...

ಚಿಕ್ಕಪಡಸಲಗಿ ಬ್ಯಾರೇಜ್ ನಿರ್ಮಾಣದ ನೇತೃತ್ವ ವಹಿಸಿದ್ದು ಕೃಷ್ಣಾ ತೀರ ರೈತ ಸಂಘ. ರಾಷ್ಟ್ರದ ಗಮನ ಸೆಳೆದ ಈ ಆಂದೋಲನದ ಮುಂಚೂಣಿಯಲ್ಲಿದ್ದದ್ದು ಇಂದಿನ ಶಾಸಕ, ಅಂದಿನ ಯುವ ಮುಖಂಡ ಸಿದ್ದು ನ್ಯಾಮಗೌಡ. ಅವರೊಂದಿಗೆ ಬಿ.ಎಂ.ಪಾಟೀಲ, ಕಂಪೆನಿಯಲ್ಲಿದ್ದ ಉದ್ಯೋಗ ತೊರೆದು ನಾಡಿಗೆ ಬಂದ ಎಂಜಿನಿಯರ್ ಅಶೋಕ ತುಂಗಳ, ಕಾರ್ಮಿಕರನ್ನು ಒಟ್ಟುಗೂಡಿಸಿದ ಬಿ.ಆರ್.ಪಾಟೀಲ, ಬನಹಟ್ಟಿಯ ನೇಕಾರ ಪ್ರತಿನಿಧಿ ಭೀಮಪ್ಪ ಬೇಕೂರ ಮುಂತಾದವರು ಕೈಜೋಡಿಸಿದ್ದರು.

ಅನೇಕ ವರ್ಷ ಸರ್ಕಾರದ ಮುಂದೆ ಬೇಡಿಕೆ ಇಟ್ಟ ಈ ಭಾಗದ ಜನರಲ್ಲಿ ಆಸೆ ಚಿಗುರೊಡೆದದ್ದು 1985ರಲ್ಲಿ. ಆಗ ಜಮಖಂಡಿಗೆ ಬಂದಿದ್ದ ಸರ್ಕಾರಿ ಪ್ರತಿನಿಧಿ ₹ 15 ಲಕ್ಷ ಸಂಗ್ರಹಿಸಿ ಕೊಟ್ಟರೆ ಬ್ಯಾರೇಜ್ ನಿರ್ಮಿಸಲು ಸರ್ಕಾರ ಸಿದ್ಧ ಎಂದರು. ರೈತರು ಪ್ರತಿ ಎಕರೆಗೆ ಕನಿಷ್ಠ ₹ 150 ನೀಡಿದರು. ಕೇವಲ 15 ದಿನಗಳಲ್ಲಿ ₹ 15 ಲಕ್ಷ ಸಂಗ್ರಹವಾಯಿತು. ಆದರೆ ಇದನ್ನು ತೆಗೆದುಕೊಂಡು ಬೆಂಗಳೂರಿಗೆ ಹೋದಾಗ ಸರ್ಕಾರ ಮಾತು ಬದಲಿಸಿತು. ಅಧಿಕಾರಿಗಳಿಗೆ ಹೇಳಿ ವರದಿ ತರಿಸಿತು. ಅವರು ಪೂರಕ ವರದಿ ಸಲ್ಲಿಸದ ಕಾರಣ ಸರ್ಕಾರ ಯೋಜನೆಯಿಂದ ಹಿಂದೆ ಸರಿಯಿತು.

ಹೀಗೆ ಖಾಸಗಿಯಾಗಿ ಬ್ಯಾರೇಜ್ ನಿರ್ಮಿಸುವ ತೀರ್ಮಾನ ಕೈಗೊಳ್ಳುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು. ಜನರು, ಜನರಿಗಾಗಿ ನಿರ್ಮಿಸಬೇಕಾಗಿದ್ದ ಬ್ಯಾರೇಜ್‌ಗಾಗಿ ಜನರಿಂದ ಹಣ ಸಂಗ್ರಹಿಸುವ ಕಾರ್ಯ ಮೊದಲು ನಡೆಯಿತು. ಸಾಲ ಮಾಡಿ, ಆಸ್ತಿ ಮಾರಿ, ಕೈಯಲ್ಲಿದ್ದದ್ದನ್ನೆಲ್ಲ ಒಟ್ಟು ಮಾಡಿದ ರೈತರು ನೀರಿಗಾಗಿ ಹಣ ನೀಡಿದರು. 1987ರ ಅಕ್ಟೋಬರ್ 2ರಂದು ಕಾಮಗಾರಿಗೆ ಚಾಲನೆ ನೀಡಲಾಯಿತು. ಬೆಳವಲದ ಮಕ್ಕಳು ಹಗಲು ರಾತ್ರಿ ಬೆವರು ಸುರಿಸಿದರು. ಪ್ರವಾಹ ಬಂದ ಕಾರಣ ಒಮ್ಮೆ ಕೆಲಸ ಸ್ಥಗಿತಗೊಂಡಿತು. ಮತ್ತೆ ಕೆಲಸ ಮುಂದುವರಿದಾಗ ಆಳುಗಳ ಕೊರತೆ ಎದುರಾಯಿತು. ಮುಖಂಡರು ಹಳ್ಳಿ ಹಳ್ಳಿ ಅಡ್ಡಾಡಿ ಶ್ರಮದಾನಕ್ಕೆ ಕರೆ ನೀಡಿದರು. ಇದರಿಂದ ಕಾಮಗಾರಿಗೆ ಹೊಸ ಆಯಾಮ ಸಿಕ್ಕಿತು. ಜನರು ತಮ್ಮ ಬುತ್ತಿ ತಾವೇ ಕಟ್ಟಿಕೊಂಡು ಬಂದು ಕೆಲಸ ಮಾಡಿದರು. ಈ ಉತ್ಸಾಹವನ್ನು ಕಂಡು ಪರ ಊರಿಂದಲೂ ಜನರು ಬಂದು ನೆರವಾದರು. ಕೆಲವು ಸಂಘ – ಸಂಸ್ಥೆಗಳಿಂದ ಧನ ಸಹಾಯವೂ ಲಭಿಸಿತು.

### ನದಿ ತುಂಬುವ ಯೋಜನೆ

ಬ್ಯಾರೇಜ್ ನಿರ್ಮಾಣವಾಗಿ ಒಂದು ದಶಕದವರೆಗೆ ಸಮೃದ್ಧ ನೀರು ಲಭಿಸಿದ್ದರಿಂದ ಈ ಭಾಗದ ಹೊಲಗಳು ನಳನಳಿಸಿದವು. ರೈತರೂ ಶ್ರೀಮಂತರಾದರು. ಆದರೆ ನೀರಿನ ಬಳಕೆ ಹೆಚ್ಚಿದಂತೆ ಕೃಷ್ಣೆಯ ಒಡಲು ಬತ್ತತೊಡಗಿತು. 30 ಸಾವಿರ ಎಕರೆ ಇದ್ದ ನೀರಾವರಿ ಪ್ರದೇಶದ ವ್ಯಾಪ್ತಿ ಇಮ್ಮಡಿಗೊಳ್ಳುತ್ತಿದ್ದಂತೆ ನೀರನ್ನು ಸಾಲ ಪಡೆಯುವ ಸ್ಥಿತಿ ಬಂದಿತು. ಕಳೆದ ಒಂದು ದಶಕದಿಂದ ಮಹಾರಾಷ್ಟ್ರ ಸರ್ಕಾರಕ್ಕೆ ಹಣ ಕೊಟ್ಟು ನೀರು ಪಡೆಯಲಾಗುತ್ತದೆ. ಆರಂಭದಲ್ಲಿ ಒಂದು ಟಿಎಂಸಿಗೆ ₹ 4 ಕೋಟಿ ಇದ್ದ ಬೆಲೆ ನಂತರ ಆರು ಕೋಟಿಗೆ ಹೆಚ್ಚಿತು. ಇದನ್ನು ತಪ್ಪಿಸಲು ಕೃಷ್ಣಾ ತೀರ ರೈತ ಸಂಘ 'ನದಿ ತುಂಬಿಸುವ' ಯೋಜನೆ ಹಮ್ಮಿಕೊಂಡಿದೆ. ಬೆಳ್ಳಿಹಬ್ಬದ ಸಂದರ್ಭದಲ್ಲಿ ಈ ಯೋಜನೆಯನ್ನು ಆರಂಭಿಸಲಾಗಿದೆ. ಇದಕ್ಕಾಗಿ ಬ್ಯಾರೇಜ್‌ನ ಎತ್ತರವನ್ನು 1.5 ಮೀಟರ್ ಹೆಚ್ಚಿಸಲಾಗಿದೆ. ಕೆಳಭಾಗದಲ್ಲಿ ಹರಿಯುವ ನೀರನ್ನು ಪಂಪ್ ಮಾಡಿ ವಾಪಸ್ ನದಿಗೇ ಹಾಕಲಾಗುತ್ತದೆ. ಜನವರಿ ಕೊನೆಯ ವಾರದಲ್ಲಿ ನದಿ ತುಂಬಲಿದೆ ಎಂದು ಅಂದಾಜು ಮಾಡಲಾಗಿದ್ದು ಬಾಗಿನ ಅರ್ಪಿಸಿದ ನಂತರ ಈ ಭಾಗದ ರೈತರ ಬಾಳಿನ ಹೊಸ ಅಧ್ಯಾಯ ಆರಂಭವಾಗಲಿದೆ.


6

### ಇದು ಸಂಭ್ರಮದ ಸಮಯ

ಪ್ರತಿ ದಿನ ಸುಮಾರು ಮುನ್ನೂರು ಮಂದಿಯಂತೆ ಕೆಲಸ ಮಾಡಿ ಬಾಂದಾರ ನಿರ್ಮಾಣ ಮಾಡಿದ ನೆನಪು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಇತ್ತೀಚಿನ ಒಂದು ದಶಕದಲ್ಲಿ ನೀರು ಕಡಿಮೆಯಾದ ಕಾರಣ ಮತ್ತೆ ಆತಂಕ ಕಾಡಿತ್ತು. ಈಗ ಬಾಂದಾರದ ಎತ್ತರ ಹೆಚ್ಚು ಮಾಡಿ ನದಿ ತುಂಬಿಸುವ ಯೋಜನೆ ಯಶಸ್ವಿಯಾಗಿ ನಡೆಯುತ್ತಿದೆ. 25 ವರ್ಷಗಳ ಹಿಂದೆ ಮೈಮುರಿದು ದುಡಿದ ಕಾರಣ ಈ ಭಾಗದ ರೈತರು ನಂತರ ಸುಭದ್ರ ಜೀವನ ನಡೆಸುವಂತಾಯಿತು. ನದಿ ದಂಡೆಯಲ್ಲಿ ಗುಡಿಸಲು ಹಾಕಿಕೊಂಡು ಜೀವನ ನಡೆಸುತ್ತಿದ್ದ ಸಣ್ಣ ರೈತರಂತೂ ಬದಲಾವಣೆಯ ಹೊಸ ಶಕೆಯನ್ನು ಕಂಡರು. ಈ ಎಲ್ಲ ಕಾರಣಗಳಿಂದ ಬೆಳ್ಳಿಹಬ್ಬದ ಸಂಭ್ರಮ ಹೆಚ್ಚಿದೆ.

ನದಿ ತುಂಬುವ ಯೋಜನೆಯಿಂದಾಗಿ ಈ ಭಾಗದ 70 ಸಾವಿರ ಎಕರೆ ಪ್ರದೇಶ ಮತ್ತೊಮ್ಮೆ ಕೃಷಿ ಚಟುವಟಿಕೆಯಿಂದ ಸಮೃದ್ಧವಾಗಲಿದೆ. ಬೆಳ್ಳಿಹಬ್ಬದ ಸಂಭ್ರಮದಲ್ಲಿ ಇನ್ನಷ್ಟು ಉತ್ತಮ ಭವಿಷ್ಯದ ಕನಸು ನನಸಾಗಿಸುವ ಸಂಕಲ್ಪ ತೊಡುವುದಕ್ಕೂ ರೈತರು ಮುಂದಾಗಲಿದ್ದಾರೆ ಎನ್ನುತ್ತಾರೆ ಕೃಷ್ಣಾ ತೀರ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದು ನ್ಯಾಮಗೌಡ.

**(ಚಿತ್ರಗಳು: ಕೃಷ್ಣಾ ತೀರ ರೈತ ಸಂಘದ ಸಂಗ್ರಹದಿಂದ)**

### ಹಿತ ನೀಡಿದ ಬ್ಯಾರೇಜ್

25 ವರ್ಷಗಳ ಹಿಂದಿನ ಪರಿಸ್ಥಿತಿ ಹೇಳತೀರದು. ಮಹಾರಾಷ್ಟ್ರದಲ್ಲಿ ಮಳೆ ಬಂದರೆ ನೆರೆಯಾಗಿ ಕಾಡುತ್ತಿದ್ದ ಕೃಷ್ಣಾ ನದಿ ಮೂರು ತಿಂಗಳು ಒಣಗುತ್ತಿತ್ತು. ಈ ಸಂದರ್ಭದಲ್ಲಿ ನದಿಯನ್ನು ನೋಡಿದರೆ ಭಯಾನಕವಾಗಿ ಕಾಣುತ್ತಿತ್ತು. ಬ್ಯಾರೇಜ್ ನಿರ್ಮಾಣದಿಂದಾಗಿ ಧಾರಾಳ ನೀರು ಲಭಿಸಿದ್ದು ಮಾತ್ರವಲ್ಲ, ಹಿತ ನೀಡುವ ವಾತಾವರಣವೂ ನಿರ್ಮಾಣವಾಯಿತು. ಅಂದು ನನಗೆ ಮೂವತ್ತರ ಹರೆಯ. ಯುವಕರನ್ನೆಲ್ಲ ಒಟ್ಟುಗೂಡಿಸಿ ಬ್ಯಾರೇಜ್ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡ ದೃಶ್ಯಗಳು ಈಗಲೂ ಕಣ್ಣ ಮುಂದೆ ನಿಲ್ಲುತ್ತವೆ. ಹೊಲಕ್ಕೆ ನೀರು ಬಿಡುವಾಗಲೆಲ್ಲ ಅಂದಿನ ಶ್ರಮದಾನದ ನೆನಪಾಗುತ್ತದೆ. ಚಿಕ್ಕಪಡಸಲಗಿಯಿಂದ 20 ಕಿಲೋಮೀಟರ್ ದೂರದಲ್ಲಿರುವ ನಾನು ಸೇರಿದಂತೆ ಈ ಭಾಗದ ರೈತರ ಬಾಳು ಬೆಳಗಲು ಈ ಬ್ಯಾರೇಜ್ ಕಾರಣ.

**–ಮುತ್ತಣ್ಣ ಹಿಪ್ಪರಗಿ, ಮುತ್ತೂರು ಗ್ರಾಮ**

| | |
|---|---|
| 1 | ಎತ್ತರ ಹೆಚ್ಚಿಸಿ ನದಿ ತುಂಬುವ ಯೋಜನೆಯಡಿ ನೀರನ್ನು ಪಂಪ್ ಮಾಡುತ್ತಿರುವುದು |
| 2 | ಬ್ಯಾರೇಜ್ ನಿರ್ಮಾಣಕ್ಕಾಗಿ ರೈತರ ಶ್ರಮದಾನ |
| 3 | ಕನಸಿನ ಸಾಕಾರಕ್ಕೆ ಕೈಜೋಡಿಸಿದ ಮಹಿಳೆಯರು |
| 4 | ಯಂತ್ರಗಳ ಸಹಾಯದೊಂದಿಗೆ ಬ್ಯಾರೇಜ್ ನಿರ್ಮಾಣ |
| 5 | ಬ್ಯಾರೇಜ್‌ನ ಒಂದು ಹಂತ ಪೂರ್ಣಗೊಂಡಾಗ ಕಂಡದ್ದು ಹೀಗೆ |
| 6 | ಯೋಜನೆ ಸಫಲಗೊಂಡಾಗ... |